**(ದಿನಾಂಕಃ 16.06.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಪಾಟೀ ಸವಾಲುಃ ಪ್ರತಿವಾದಿ *1* ರವರ ಪರ ವಕೀಲರಾದ ಶ್ರೀ ಜಿ.ಕೆ ರವರಿಂದ ಃ-

1. ಈ ಹಿಂದೆ ನನ್ನ ಸಹೋದರನಾದ ಪ್ರತಿವಾದಿ 1 ರವರು ಇದೇ ದಾವಾ ಆಸ್ತಿಯ ಮೇಲೆ ಅಸಲು ದಾವೆ ಸಂಖ್ಯೆ 128/2016 ಅನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯನ್ನು ಪ್ರತಿವಾದಿ 4 ಮತ್ತು 5 ರವರು ಮಾರಾಟ ಮಾಡಿರುತ್ತಾರೆ ಎಂದು ಸಾಗರ ನ್ಯಾಯಾಲಯದಿಂದ ಡಿಕ್ರಿ ಕಾಪಿಯನ್ನು ತಂದಿರುತ್ತಾರೆ ಎಂದರೆ ಸರಿ.

2. ಸದರಿ ಡಿಕ್ರಿಯ ಆದೇಶದ ಮೇಲೆ ಅಮಲ್ಜಾರಿ ಪ್ರಕರಣವನ್ನು ಹಿರಿಯ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಪ್ರತಿವಾದಿ *2* ರವರ ಪರ ವಕೀಲರಾದ ಶ್ರೀಮತಿ ಎಸ್.ವಿ.ಎಂ ರವರಿಂದ ಃ-

3. ಪ್ರತಿವಾದಿ 2 ರವರು ನನ್ನ ಸಹೋದರಿ ಎಂದು ಸೂಚಿಸಿದರೆ ಸರಿ. ಪ್ರತಿವಾದಿ 2 ರವರಿಗೂ ಸಹ ದಾವಾ ಸ್ವತ್ತಿನಲ್ಲಿ ಪಾಲು ಇರುತ್ತದೆ ಎಂದು ಸೂಚಿಸಿದರೆ ಸರಿ.

ಪಾಟೀ ಸವಾಲುಃ ಪ್ರತಿವಾದಿ *3* ರವರ ಪರ ವಕೀಲರಾದ ಶ್ರೀ ಎಂ.ಜಿ.ಎಸ್ ರವರಿಂದ ಃ-

(ಈ ಹಂತದಲ್ಲಿ ಪ್ರತಿವಾದಿ 3 ರವರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.